ಸಮಿತಿಯವರು ತೀರ್ಮಾನ ಮಾಡಿದ್ದರು. ಅದರಂತೆಯೇ ಈಗಲೂ ನಡೆದುಕೊಂಡು ಬರುತ್ತಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಹೊಸದುರ್ಗ ಜಿಲ್ಲೆಯಲ್ಲಿ R.C.F. ಜಿಲ್ಲಾಬೋರ್ಡು ರಸ್ತೆ, 4ನೆಯ ದರ್ಜೆಯ ರಸ್ತೆ ಎಂಬುದಾಗಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

ಶ್ರೀ ವೈ. ಹುಚ್ಚಮಾಸ್ತಿಗೌಡ.—ಈ ಹಿಂದೆ ಸರ್ಕಾರದವರು ಒಂದು ಸಾರಿ ಕೆಲವು ಜಿಲ್ಲಾ ಬೋರ್ಡುಗಳ ಅಧ್ಯಕ್ಷರ ಸಮಿತಿಯೊಂದನ್ನು ರಚಿಸಿ ಆ ಸಮಿತಿಯವರು ಒಪ್ಪಿಸಿದ ನಲಹೆಯ ಪ್ರಕಾರವೆ ಈ ರಸ್ತೆಗಳನ್ನು ಈ ರೀತಿ ಮಾಡಬೇಕೆಂಬ ತೀರ್ಮಾನಕ್ಕೆ ಬಂದರಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು. 1949 ರಲ್ಲಿ ಆ ರೀತಿ ಮಾಡಿದರು.

Bridge across the Arkavathi near Bekuppe, Kanakapura Taluk.

Q.—31. Sri S. KARIAPPA (Virupakshipura).—

Will the Government be pleased to state :—

(*a*) the date of sanction of the bridge across the Arkavathi near Bekuppe, Kanakapura taluk ;

(*b*) the total estimated cost of the same ;

(*c*) the reasons for delay in taking up its construction ?

A.—Sri H. K. VEERANNA GOWDH (Minister for Public Works).—

(*a*) 3rd July 1956.

(*b*) 3,31,000.

(*c*) Investigations had to be made as to the type of foundation to be adopted and hence it has not yet been possible to commence work.

ಶ್ರೀ ಎಸ್. ಕರಿಯಪ್ಪ.—ಈ ಸೇತುವೆಗೆ ಸಂಬಂಧವಾದ ಪರಿಶೀಲನೆ ಕಾರ್ಯಗಳೆಲ್ಲ ಈಗ ಮುಗಿದಿವೆಯೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಮುಗಿದಿಲ್ಲ; ಇನ್ನೂ ನಡೆಯುತ್ತಿದೆ.

ಶ್ರೀ ಎಸ್. ಕರಿಯಪ್ಪ.—ಮುಗಿಯುವುದಕ್ಕೆ ಇನ್ನೂ ಎಷ್ಟು ದಿವಸಗಳು ಬೇಕಾಗಬಹುದು?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾನೆ ಬೋರುಪೆಲ್ ಹಾಕುತ್ತಿದ್ದಾರೆ—ಎಷ್ಟು ಆಳದ ತನಕ ತಳಪಾಯ ಹಾಕಬೇಕೆಂಬುದು ತೀರ್ಮಾನವಾದ ಕೂಡಲೆ ಮುಂದಿನ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಆದರೆ ಅಷ್ಟೇನೂ ನಿಧಾನವಾಗಲಾರದು.

ಶ್ರೀ ಎಸ್. ಕರಿಯಪ್ಪ.—ಆದರೆ ಸರ್ಕಾರದವರು ಈಗಾಗಲೇ ಒಂದಾವರ್ತಿ ಟೆಂಡರುಗಳನ್ನು ಕರೆದಿದ್ದಾರೆ. ಆದರೆ ಕೆಲಸದ ಸಂಪೂರ್ಣ ಮಾಹಿತಿ ಗೊತ್ತಿಲ್ಲದಿರುವುದರಿಂದ ಪುನಃ ಟೆಂಡರುಗಳನ್ನು ಕರೆಯುವರೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾರು ಟೆಂಡರ್ ಕರೆದಿದ್ದಾರೋ ಏನೋ ಆ ವಿಚಾರವೇ ನನಗೆ ಗೊತ್ತಿಲ್ಲ. It is being investigated.

Construction of Bridges at Dennur, Sathehal and Tamba.

Q.—94. SRI SHANKAR GOUDA, Y. PATIL (Sindigi).—

Will the Government be pleased to state :—

(*a*) whether they are aware of the commercial importance of the Sholapur Bellary Road ;

(*b*) whether it has come to their notice that great inconvenience is caused to the traffic due to lack of bridges at Dennur on Krishna river, Hungund Taluq and at Sathehal, Bagevadi on Don river and at Tamba on the Nala, Indi Taluk ;

(*c*) whether they would take immediate steps for the construction of bridges at the above said places in order to avoid 60 miles round about journey for the vehicles and public ?

A.— Sri H. K. VEERANNA GOWDH (Minister for Public Works).—

(*a*) There is no direct road known as "Sholapur-Bellary" Road. There is however a road connecting these two places *via* Bijapur, Bagalkot and Hungund. This is important commercially.

(*b*) Yes.

(*c*) A proposal to construct Irish bridges has been made and will be considered subject to availability of funds.

ಶ್ರೀ ಶಂಕರಗೌಡ ವೈ. ಪಾಟೀಲ್.—ನನ್ನ ಪ್ರಶ್ನೆಯ (ಎ) ವಿಭಾಗಕ್ಕೆ ಉತ್ತರವಾಗಿ ಸೊಲ್ಲಾಪುರ ಬಳ್ಳಾರಿ ಎಂಬ ಹೆಸರುಳ್ಳ ನೇರವಾದ ರಸ್ತೆಯೇ ಇಲ್ಲವೆಂದು ತಿಳಿಸಲಾಗಿದೆ. ಆದರೆ ಹುನಗುಂದದ ತಾಲ್ಲೂಕಿನಲ್ಲಿ ಕೃಷ್ಣಾ ನದಿಯ ದಂಡೆಯಲ್ಲಿರುವ ಧನ್ನೂರು ಬಾಗೇವಾಡಿ ತಾಲ್ಲೂಕಿನಲ್ಲಿ ಡೋಣಿ ನದಿ ದಂಡೆಯಲ್ಲಿರುವ ಸಾಥಿ ಹಾಳ ಮತ್ತು ಇಂಡಿ ತಾಲ್ಲೂಕಿನಲ್ಲಿ ಹಳ್ಳದ ದಂಡೆಯ ಮೇಲಿರುವ ತಾಂಬೆ ಎಂಬ ಈ ಗ್ರಾಮಗಳ ಮೂಲಕ ಹೋಗತಕ್ಕ ರಸ್ತೆಯನ್ನು ಸರ್ಕಾರದವರು ಏನೆಂದುಕರೆಯುತ್ತಾರೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಆದರೆ ಆ ಸ್ಥಳದಲ್ಲಿ ಬಿಜಾಪುರ ಬಾಗಲು ಕೋಟೆ ಮತ್ತು ಹುನಗುಂದಗಳ ಕಡೆಗೆ ಹೋಗತಕ್ಕ ಒಂದು ರಸ್ತೆಯಿದೆ. ಅದನ್ನೇ